# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | **80** |
| ಸದಸ್ಯರ ಹೆಸರು | ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | 13/02/2023 |
| ಉತ್ತರಿಸುವ ಸಚಿವರು | ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೀದರ್ ಜಿಲ್ಲೆಯಲ್ಲಿ ಪ್ರಾರಂಭವಾದ ಬ್ರಿಮ್ಸ್ ಮಹಾವಿದ್ಯಾಲಯ ಮತ್ತು ಆಸ್ಪತ್ರೆಯ ಕಟ್ಟಡ ಪ್ರಾರಂಭವಾಗಿದ್ದು ಯಾವಾಗ: ಈ ಕಟ್ಟಡದ ಕಾಮಗಾರಿ ಪೂರ್ಣಗೊಂಡಿದ್ದು ಯಾವಾಗ: ಪೂರ್ಣಗೊಂಡಿದ್ದಲ್ಲಿ, ಕಟ್ಟಡವನ್ನು ಇಲಾಖೆಗೆ ಹಸ್ತಾಂತರ ಮಾಡಲಾಗಿದೆಯೇ: | ಬೀದರ್ ಜಿಲ್ಲೆಯಲ್ಲಿ ಪ್ರಾರಂಭವಾಗಿರುವ ಬ್ರಿಮ್ಸ್ ಮಹಾವಿದ್ಯಾಲಯದ ಕಟ್ಟಡವು 2005 ರಲ್ಲಿ ಪ್ರಾರಂಭವಾಗಿ 2006 ರಲ್ಲಿ ಪೂರ್ಣಗೊಂಡಿರುತ್ತದೆ. ಈ ಹಿಂದಿನ 300 ಹಾಸಿಗೆಗಳ ಜಿಲ್ಲಾ ಆಸ್ಪತ್ರೆಯು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಕಟ್ಟಡ, ಪೀಠೋಪಕರಣ, ಸಿಬ್ಬಂದಿ ಮತ್ತು ಮೂಲಭೂತ ಸೌಕರ್ಯಗಳೊಂದಿಗೆ 2007 ರಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಗೆ ಹಸ್ತಾಂತರಗೊಂಡಿರುತ್ತದೆ.<br><br>ಬ್ರಿಮ್ಸ್ ಆವರಣದಲ್ಲಿ 450 ಹಾಸಿಗೆಗಳ ನೂತನ ಆಸ್ಪತ್ರೆಯ ಕಟ್ಟಡ ಕಾಮಗಾರಿಯನ್ನು 2013-14ನೇ ಸಾಲಿನಲ್ಲಿ ಲೋಕೋಪಯೋಗಿ ಇಲಾಖೆಯ ವತಿಯಿಂದ ಪ್ರಾರಂಭಗೊಳಿಸಲಾಗಿದ್ದು, 2017ನೇ ಸಾಲಿನಲ್ಲಿ ಪೂರ್ಣಗೊಂಡಿರುತ್ತದೆ. ಆದರೆ, ಸದರಿ ಕಟ್ಟಡವು ಲೋಕೋಪಯೋಗಿ ಇಲಾಖೆಯಿಂದ ಅಧಿಕೃತವಾಗಿ ಹಸ್ತಾಂತರಗೊಂಡಿರುವುದಿಲ್ಲ. |
| ಆ) | ಹಸ್ತಾಂತರ ಮಾಡದಿದ್ದಲ್ಲಿ, ಯಾವ ನಿಯಮ/ಆಧಾರದ ಮೇಲೆ ಮಹಾವಿದ್ಯಾಲಯ ಮತ್ತು ಆಸ್ಪತ್ರೆ ಪ್ರಾರಂಭಿಸಲಾಯಿತು: ಮಹಾವಿದ್ಯಾಲಯ ಹಾಗೂ ಆಸ್ಪತ್ರೆ ಕಟ್ಟಡಗಳ ಸ್ಥಿತಿಗತಿ ಪ್ರಸ್ತುತ ಯಾವ ಹಂತದಲ್ಲಿದೆ: | 2017ರಲ್ಲಿ ಸರ್ಕಾರದ ಕಾರ್ಯಕ್ರಮಗಳನ್ವಯ 450 ಹಾಸಿಗೆಗಳ ಕಟ್ಟಡ ಲೋಕಾರ್ಪಣೆ ಮಾಡಲಾಗಿರುತ್ತದೆ ಹಾಗೂ ಬ್ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯಕ್ಕೆ ಎಂಸಿಐ/ಎನ್‌ಎಂಸಿ ನಿಯಾಮಗಳನ್ವಯ 150 ಎಂಬಿಬಿಎಸ್ ಪ್ರವೇಶಾತಿಗಾಗಿ 650 ಹಾಸಿಗೆಯುಳ್ಳ ಆಸ್ಪತ್ರೆಯು ಅತೀ ಅವಶ್ಯಕತೆ ಇದ್ದುದರಿಂದ ಈ 450 ಹಾಸಿಗೆಗಳ ನೂತನ ಆಸ್ಪತ್ರೆ ಕಟ್ಟಡವು ಕೂಡ ದಿನ ನಿತ್ಯ ಆಸ್ಪತ್ರೆಗೆ ಬರುವ ಸಾರ್ವಜನಿಕ ರೋಗಿಗಳ ಸೇವೆಗಾಗಿ ಹಾಗೂ ಎಂಸಿಐ/ಎನ್‌ಎಂಸಿ ಪರಿವೀಕ್ಷಣೆಗಾಗಿ ಉಪಯೋಗಿಸಲಾಗುತ್ತಿದೆ. ಸದರಿ ನೂತನ ಆಸ್ಪತ್ರೆ ಕಟ್ಟಡದಲ್ಲಿ ಮೇಲ್ಛಾವಣಿ ಸೋರುವಿಕೆ ಹಾಗೂ ಇನ್ನಿತರೆ ಸಣ್ಣ ಪುಟ್ಟ ದೋಷಗಳಿದ್ದು, ಒಟ್ಟಾರೆ ನೂತನ ಆಸ್ಪತ್ರೆ ಕಟ್ಟಡ ಸುಸ್ಥಿತಿಯಲ್ಲಿದ್ದು, ಸಾರ್ವಜನಿಕ ಉಪಯೋಗದಲ್ಲಿರುತ್ತದೆ. |
| ಇ) | ಈ ಕಟ್ಟಡಗಳಲ್ಲಿ ಅಗ್ನಿಶಾಮಕ ಹಾಗೂ ರೋಗಿಗಳಿಗೆ ಲಿಫ್ಟ್ ವ್ಯವಸ್ಥೆ ಇದೆಯೇ: ಇಲ್ಲವಾದಲ್ಲಿ, ಯಾವುದಾದರೂ ಅನಾಹುತ/ಘಟನೆ ಜರುಗಿದರೆ ಇದಕ್ಕೆ ಹೊಣೆಗಾರರು ಯಾರು; | ಬ್ರಿಮ್ಸ್ ಬೀದರ್ ಸಂಸ್ಥೆಯ ಕಾಲೇಜು ಕಟ್ಟಡ, ನೂತನ ಆಸ್ಪತ್ರೆ, ವೈದ್ಯರ ವಸತಿ ಗೃಹಗಳ ಸಮುಚ್ಚಯ, ವೈದ್ಯ ವಿದ್ಯಾರ್ಥಿಗಳ ಹಾಸ್ಟೆಲ್ ಕಟ್ಟಡ, ಬೋಧಕೇತರ ಸಿಬ್ಬಂದಿಗಳ ವಸತಿ ಸಮುಚ್ಚಯಗಳಲ್ಲಿ ಲಿಫ್ಟ್ ವ್ಯವಸ್ಥೆ ಲಭ್ಯವಿದ್ದು, ಸುಸ್ಥಿತಿಯಲ್ಲಿ ಕಾರ್ಯನಿರ್ವಹಿಸುತ್ತಿವೆ. 300 ಹಾಸಿಗೆಗಳ ಹಳೇ ಆಸ್ಪತ್ರೆ ಕಟ್ಟಡವು 2 ಮಹಡಿಗಳ ಕಟ್ಟಡವಾಗಿರುವುದರಿಂದ, ಲಿಫ್ಟ್ ವ್ಯವಸ್ಥೆ ಲಭ್ಯವಿರುವುದಿಲ್ಲ. |



Generated from eOffice by DR K SUDHAKAR, MED-MIN(SK) MINISTER, MEDICAL EDUCATION SEC on 10/02/2023 04 44 PM

| | | |
|---|---|---|
| | | 450 ಹಾಸಿಗೆಗಳ ನೂತನ ಆಸ್ಪತ್ರೆ ಜಿ+6 ಕಟ್ಟಡದಲ್ಲಿ ಕೆಟಿಟಿಪಿ ನಿಯಮಗಳನ್ವಯ ಅಗ್ನಿಶಾಮಕ ಸೇವೆಗಳಿಗಾಗಿ ಟೆಂಡರ್ ಕರೆಯಲಾಗಿದ್ದು, ಅಗ್ನಿಶಾಮಕ & ತುರ್ತು ಸೇವೆಗಳ ಇಲಾಖೆಗಳಿಂದ ಎನ್‌ಓಸಿ ಪಡೆಯುವ ಪ್ರಕ್ರಿಯೆ ಪ್ರಗತಿಯಲ್ಲಿರುತ್ತದೆ. ಈ ಸಂಬಂಧ ಸಂಸ್ಥೆಯಿಂದ ಅಗ್ನಿಶಾಮಕ ತುರ್ತು ಸೇವೆಗಳ ಇಲಾಖೆಗೆ ಪಾವತಿಸಬೇಕಾಗಿರುವ ದಂಡ ಶುಲ್ಕ ಮೊತ್ತ ರೂ.1.34 ಕೋಟಿಗಳ ಮಂಜೂರಾತಿಗಾಗಿ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲು ಸೂಕ್ತ ಪ್ರಸ್ತಾವನೆ ಸಲ್ಲಿಸುವಂತೆ ನಿರ್ದೇಶಕರು, ಬೀದರ್ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಇವರಿಗೆ ಪತ್ರ ಬರೆಯಲಾಗಿದೆ. |
| ಈ | ಕಟ್ಟಡದ ಮೇಲ್ಚಾವಣಿಗಳು ಮಳೆಯಿಂದ ಸೋರುತ್ತಿದ್ದು, ಆಸ್ಪತ್ರೆಗೆ ಬರುವ ಬಡ ರೋಗಿಗಳು ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮವೇನು? | ಲೋಕೋಪಯೋಗಿ ಇಲಾಖೆಯಿಂದ ಕೈಗೊಳ್ಳಲಾಗಿರುವ ಬ್ರಿಮ್ಸ್ ಬೋಧಕ ಆಸ್ಪತ್ರೆಯ ಕಟ್ಟಡ ಕಾಮಗಾರಿಯ ಗುಣಮಟ್ಟದ ಬಗ್ಗೆ 2021-22ನೇ ಸಾಲಿನಲ್ಲಿ ನಡೆದ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಸಭೆಯ ತೀರ್ಮಾನದನ್ವಯ ಕಟ್ಟಡ ಪರಿವೀಕ್ಷಣೆಯನ್ನು ದಿನಾಂಕ:09.11.2022 ರಂದು ಕೈಗೊಳ್ಳಲಾಗಿರುತ್ತದೆ. Joint Experts ತಂಡವು ನೀಡಿರುವ ವರದಿಯಂತೆ ಗುತ್ತಿಗೆದಾರ ಸಂಸ್ಥೆಯಾದ ಎನ್‌ಸಿಸಿ ಸಂಸ್ಥೆಗೆ ಈಗಾಗಲೇ ಬಿಡುಗಡೆ ಮಾಡಲಾಗಿರುವ ಅನುದಾನದಲ್ಲಿ, ಸಮರ್ಪಕವಾಗಿ ಕೈಗೊಳ್ಳದೇ ಇರುವ ಆಸ್ಪತ್ರೆಯ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿಕೊಡುವಂತೆ ಸೂಚಿಸಲಾಗಿರುತ್ತದೆ.<br><br>ಬ್ರಿಮ್ಸ್ ಬೋಧಕ ಆಸ್ಪತ್ರೆಯ ಕಟ್ಟಡದ ಮೇಲ್ಚಾವಣಿಗಳು ಮಳೆ ನೀರು ಸಂಗ್ರಹದಿಂದ ಸೋರುತ್ತಿದ್ದು, ಈ ಸಂಬಂಧ ಲೋಕೋಪಯೋಗಿ ಇಲಾಖೆಯೊಂದಿಗೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಇಂಜಿನಿಯರಿಂಗ್ ಘಟಕಗಳ ಸಮನ್ವಯದೊಂದಿಗೆ ಪರಿವೀಕ್ಷಣೆಗಳನ್ನು ಕೈಗೊಳ್ಳಲಾಗಿರುತ್ತದೆ. ಮುಖ್ಯವಾಗಿ ಜಿ+6 ಕಟ್ಟಡದ ನಿರ್ವಹಣೆಯಲ್ಲಿ ಸಣ್ಣ ಪುಟ್ಟ ದೋಷಗಳಿರುವುದನ್ನು ಗಮನಿಸಲಾಗಿರುತ್ತದೆ. ಈ ಸಂಬಂಧ ಸದರಿ ಕಟ್ಟಡದ ನಿರ್ವಹಣೆಗಾಗಿ ಸೇವಾ ಗುತ್ತಿಗೆ ಪಡೆಯಲು ತೀರ್ಮಾನಿಸಲಾಗಿರುತ್ತದೆ. |

**ಕಡತ ಸಂಖ್ಯೆ:ಎಂಇಡಿ 85 ಎಂಎಸ್‌ಎಫ್ 2023**

**(ಡಾ|| ಕೆ. ಸುಧಾಕರ್)**
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ
ವೈದ್ಯಕೀಯ ಶಿಕ್ಷಣ ಸಚಿವರು